■ **ಡಾ. ಸುಂಕಂ ಗೋವರ್ಧನ**

ಕಲೆ: ವಿಜಯಕುಮಾರಿ ಆರ್

ಕ್ಷಮಿಸು ಬಸವಣ್ಣ, ನೀನು ಹೇಳಿದ ಸಪ್ತಸೂತ್ರಗಳನ್ನು ಎಳವೆಯಿಂದಲೇ ಪಾಲಿಸಿಕೊಂಡು ಬಂದಿದ್ದೇನೆ. ಪ್ರಾಥಮಿಕ ಶಾಲೆಯಲ್ಲಿ ನಮ್ಮ ಗುರುಗಳಾಗಿದ್ದ ಮೀನಾಕ್ಷಮ್ಮನವರ ದನಿಯಲ್ಲಿ ಮೊದಲ ಬಾರಿಗೆ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ... ವಚನವನ್ನು ಕೇಳಿದಾಗ, ನನಗೆ ಬಸವಣ್ಣನೂ ತಿಳಿದಿರಲಿಲ್ಲ. ವಚನ ಸಾಹಿತ್ಯವಿರಲೀ ಸಾಹಿತ್ಯ ಎಂದರೆ ಏನು ಎಂದು ಕೂಡ ತಿಳಿದಿರಲಿಲ್ಲ. ನನಗೆ ಗೊತ್ತಿದ್ದ ಪ್ರಪಂಚವೆಂದರೆ ನನ್ನ ಮನೆ ಮತ್ತು ನನ್ನ ಶಾಲೆ, ಶಾಲೆಯಲ್ಲಿ ನನ್ನ ಪಾಲಿನ ದೇವರೆಂದರೆ ಮೀನಾಕ್ಷಮ್ಮ ಟೀಚರ್. ಅವರು ಹೇಳುವ ಪ್ರತಿಯೊಂದು ಮಾತನ್ನು ಚಾಚೂ ತಪ್ಪದೇ ಪಾಲಿಸುವುದೊಂದೇ ನನಗೆ ಗೊತ್ತಿದ್ದುದ್ದು. ಆಮೇಲೆ ಸಾಹಿತ್ಯದ ವಿದ್ಯಾರ್ಥಿಯಾದ ಮೇಲೇ ನೀನೂ ಮತ್ತು ನಿನ್ನ ಪರಿವಾರ ಸಾಹಿತ್ಯವನ್ನು ಕುರಿತು ಅಭ್ಯಾಸ ಮಾಡುವ ಯೋಗ ಬಂದಿದ್ದು. ಆದರೆ ಅಂದಿಗೆ ನನ್ನ ಪ್ರಾಥಮಿಕ ಶಾಲೆಯ ಶಿಕ್ಷಕಿಯ ದನಿಯಲ್ಲಿ ಕೇಳಿದ ವಚನ ಕಳಬೇಡ ಕೊಲಬೇಡ ನನ್ನ ಕಿವಿಯಲ್ಲಿ ಇಂದಿಗೂ ಅನುರಣಿಸುತ್ತಿದೆ.

'ಕಳಬೇಡ' ಎಂದೆ ನೀನು. ಕಳ್ಳತನ ಮಾಡಲೇ ಇಲ್ಲ. ಅದರ ಅವಶ್ಯಕತೆಯಾಗಲೀ ಅನನುಕೂಲಗಳಾಗಲೀ ನನ್ನ ಬದುಕಲ್ಲಿ ಬರಲೇ ಇಲ್ಲ. 'ಕೊಲಬೇಡ' ಎಂದೆ ನೀನು. ನನಗೆ ಸೊಳ್ಳೆಯನ್ನು ಕೂಡ ಹೊಡೆಯಲು ಸರಿಯಾಗಿ ಬರುವುದಿಲ್ಲ, ಹಾಗಾಗಿ ನಿಮ್ಮ ಮಾತನ್ನು ಕೇಳಲು ಸುಲಭವಾಯಿತು. ತಕ್ಷಣವೇ ಸೇರಿಸಬೇಕಾದ ಒಂದು ಮಾತನ್ನು ಇಲ್ಲೇ ಸೇರಿಸಿಬಿಡಬೇಕು. ಇಲ್ಲ ಅಂದರೆ ಆಮೇಲೆ ಈ ಮಾತನ್ನು ಹೇಳುವ ಅವಕಾಶ ದೊರೆಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕೆಲವರು ನನ್ನ ಮುಂದೆ ಒಂದೇ ಕೈಯಲ್ಲಿ ಸೊಳ್ಳೆಯನ್ನು ಹೊಡೆಯುವುದನ್ನು ನೋಡಿ ವಿಸ್ಮಯಗೊಂಡು ಅದನ್ನು ಅನುಕರಿಸಲು ಹೋಗಿ ಬೇಸ್ತು ಬಿದ್ದಿದ್ದೇನೆ. 'ಹುಸಿಯ ನುಡಿಯಲು ಬೇಡ' ಎನ್ನುವ ಮಾತಿಗೆ ಸುಳ್ಳು ಹೇಳಿದರೆ ಮನೆಯಲ್ಲಿ ತಂದೆಯವರಿಂದ, ಶಾಲೆಯಲ್ಲಿ ನಮ್ಮ ಹೆಡ್‌ಮಿಸ್ ಇಂದಿರಮ್ಮನವರಿಂದ ಬೀಳಬಹುದಾದ ಏಟುಗಳ ಪರಿಚಯವಿದ್ದ ನಾನು ಅದನ್ನು ಪಾಲಿಸಿದೆ. 'ಮುನಿಯಬೇಡ' ಎಂದಿರಿ ಯಾರ ಮೇಲೆ ಕೋಪ ಮಾಡಿಕೊಳ್ಳುವುದು ಐದು ಜನರಲ್ಲಿ ಮಧ್ಯದವನಾಗಿ ಹುಟ್ಟಿದವನು ನಾನು ಪ್ರೀತಿಯ ಅಕ್ಕಂದಿರ ಮೇಲೆ ಕೋಪ ಮಾಡಿಕೊಳ್ಳುವಂತಿರಲಿಲ್ಲ. ಕಾರಣ ಅವರ ಪ್ರೀತಿಪಾತ್ರ ತಮ್ಮನಾಗಿದ್ದೆ.

ಇನ್ನು ನನಗಿಂತ ಎಳೆಯರಾದ ತಮ್ಮ ಹಾಗೂ ತಂಗಿಯ ಮೇಲೆ ಮುನಿಸಿಕೊಳ್ಳಲು ಕಾರಣವೇ ಇರಲಿಲ್ಲ. ಪ್ರೀತಿಪಾತ್ರರ ಮೇಲೆ ಕೋಪ ಹೇಗೆ ಮಾಡಿಕೊಳ್ಳಲಿ? ಗೆಳೆಯರೊಡನೆ ಕೋಪ ಮಾಡಿಕೊಂಡರೆ ಬ್ರಾಹ್ಮಣರ ಮನೆಯ ತಿಂಡಿ ಡಬ್ಬಿಗಳು ದೂರ ಹೋಗುತ್ತಿದ್ದವು. ಶೆಟ್ಟರ ಮನೆಯ ಚಕ್ಕಲಿ, ಮುರುಕುಗಳು ದೂರವಾಗುತ್ತಿದ್ದವು. ಗೌಡರ ಮನೆಯ ಹಿತ್ತಲ ಹಣ್ಣುಗಳು, ಕ್ರಿಶ್ಚಿಯನ್ನರ ಕೇಕುಗಳು, ಮುಸಲ್ಮಾನರ ಚಾಕೊಲೇಟುಗಳು ಇಲ್ಲವಾಗುತ್ತಿದ್ದವು. ಗುರುಗಳ ಬಗ್ಗೆ ಒಂದು ಹೆಚ್ಚು ಮಾತು ಆಡಿದರೂ ಸಾಕು, ತಾಯಿಯವರಿಂದ ಸರಿಯಾದ ಮಾತುಗಳು ಕೇಳಬೇಕಾಗುತ್ತಿತ್ತು. ನೆರೆಹೊರೆಯವರಲ್ಲಿ ಕೋಪಗೊಂಡರೆ ವಠಾರದ ಬಾವಿಯ ನೀರಿನ ತಂಟೆಗೆ ಹೋಗುವಂತೆಯೇ ಇರಲಿಲ್ಲ. ಹಾಗಾಗಿ ನಿನ್ನ ಮಾತು ಕೇಳದೇ ವಿಧಿಯಿರಲಿಲ್ಲ.

'ಅನ್ಯರಿಗೆ ಅಸಹ್ಯ ಪಡಬೇಡ' ಎಂದೆ. ಇದು ನಮ್ಮ ತಾಯಿಯವರು ನೀಡಿದ ಬಹುದೊಡ್ಡ ಸಂಸ್ಕಾರ. ಬ್ರಾಹ್ಮಣರ ವಠಾರದಲ್ಲಿ ಹುಟ್ಟಿ ಬೆಳೆದಿದ್ದರೂ ನನ್ನ ಗೆಳೆಯರ ಗುಂಪಿನಲ್ಲಿ ಎಲ್ಲರೂ ಇರುತ್ತಿದ್ದರು. ಯಾರೇ ಗೆಳೆಯರು ಮನೆಗೆ ಬಂದರೂ ಅವರೆಲ್ಲರಿಗೂ ಅಜ್ಜಿಯವರ ಕೈತುತ್ತು ಸಿಗುತ್ತಿತ್ತು. ಹಾಗಾಗಿ ಇಲ್ಲೇನೂ ಸಮಸ್ಯೆಯಾಗುತ್ತಿರಲಿಲ್ಲ. 'ತನ್ನ ಬಣ್ಣಿಸಬೇಡ' ಎಂದಿರಿ. ನಾನೂ ಅದನ್ನು ಮೊನ್ನೆ ಮೊನ್ನೆಯವರೆಗೂ ಮೀರಿರಲಿಲ್ಲ. (ಅದನ್ನು ಕುರಿತು ಹೇಳಲೆಂದೇ ನಾನು ಈ ಪ್ರಬಂಧವನ್ನು ಬರೆಯುತ್ತಿರುವುದರಿಂದ ಅದನ್ನು ನೀವು ಮುಂದೆ ಓದಲೇಬೇಕು) 'ಇದಿರ ಹಳಿಯಲು ಬೇಡ' ಎಂದಿರಿ. ಯಾರನ್ನು ಹಳಿಯುವುದು ನನ್ನ ಕೃಶವಾದ ಶರೀರವನ್ನು ನೋಡಿಯೇ ನೀವು ತಿಳಿಯಬೇಕು.

ಯಾರನ್ನಾದರೂ ಹಳಿಯುವ ಸಾಹಸಕ್ಕಿಳಿದರೆ, ಹರ ಹರ ಶ್ರೀ ಕೂಡಲಸಂಗಮದೇವ. ನೀವು 'ಅಂತರಂಗ ಶುದ್ಧಿ' ಎಂದಿರಿ, 'ಬಹಿರಂಗ ಶುದ್ಧಿ' ಎಂದಿರಿ. ಯಾವುದಾದರೂ ಸರಿ ಶುದ್ಧವಾಗಿರಬೇಕೆಂಬುದು ನಮ್ಮ ಅಕ್ಕಂದಿರು ಹೇಳಿಕೊಟ್ಟ ಬುದ್ಧಿ. ಅಂದರೆ ನಿಮ್ಮ ಸಪ್ತಸೂತ್ರಗಳಲ್ಲಿ ಒಂದನ್ನುಳಿದು ಇನ್ನು ಆರನ್ನು ಪಾಲಿಸಿದ್ದೇನೆ. ಇನ್ನು ನಿಮ್ಮ ಸಪ್ತಸೂತ್ರದ ಮಾತಿಗೆ ಅಡ್ಡ ಬಂದಿದ್ದು ಒಂದೇ ವಿಷಯದಲ್ಲಿ. ನೀವು ಅಂದಿರಿ 'ತನ್ನ ಬಣ್ಣಿಸಬೇಡ' ಎಂದು. ಪ್ರತಿಯೊಬ್ಬರೂ ನನ್ನನ್ನು ಹೊಗಳುತ್ತಿದ್ದುದರಿಂದ ನನಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನನ್ನನ್ನು ನಾನು ಹೊಗಳಿಕೊಳ್ಳುವ ಪ್ರಮೇಯ ಹಾಗೂ ಪ್ರಸಂಗಗಳು ಎಳವೆಯಲ್ಲಿ ಬಂದಿರಲಿಲ್ಲ.

ನನ್ನ ದೇಹ, ಮನಸ್ಸು, ಮಾತು, ಮಾತಿನ ವೈಖರಿ, ಮಾತಿನ ಲಹರಿಗಳನ್ನು ನೋಡಿ ನನಗೇ ಜಿಗುಪ್ಸೆ ಬಂದಿದ್ದು ನಾನು ಶಾಲೆಯ ದಿನಗಳನ್ನು ಕಳೆದು ಕಾಲೇಜಿಗೆ ಹೋದ ನಂತರವೇ. ಶಾಲೆಯಲ್ಲಿ ಇರುವವರೆಗೂ ನನ್ನ ಮೇಲೆ ನನಗೊಂದು ರೀತಿಯ ಆತ್ಮವಿಶ್ವಾಸವಿತ್ತು. ಆಟ, ಪಾಠ, ನೋಟ, ಹಾಡುಪಾಡುಗಳಲ್ಲಿ ಒಂದು ರೀತಿಯ ಸೊಗವಿತ್ತು. ಒಡನಾಡಿಗಳು ಹಾಗೂ ಒಡನೋದಿಗಳು ಯಾರಿಂದಲೂ ನನ್ನ ಕೊರತೆಗಳು ನನಗೆ ಗೊತ್ತಾಗಲೇ ಇಲ್ಲ. ಯಾರೂ ಹೇಳಲಿಲ್ಲವೇಕೆ ಎಂದು ಹಲವು ಬಾರಿ ಕೇಳಿಕೊಂಡಿದ್ದೇನೆ. ಇಂದು ಒಂಟಿಯಾಗಿ ಕೂತು ಯೋಚನೆ ಮಾಡಿದರೆ ಯಾರಿಗೂ ಯಾರಲ್ಲಿರುವ ಕೊರತೆಗಳೂ ಅಂದಿಗೆ ಕಾಣುತ್ತಲೇ ಇರಲಿಲ್ಲವೇನೋ ಅನ್ನಿಸುತ್ತದೆ. ಅದನ್ನೇ ಅಲ್ಲವೇ ಅನ್ನುವುದು 'ಬಾಲ್ಯ' ಎಂದು.

ಹಾಗಾದರೆ ಒಂದು ಘಟನೆ ನನ್ನ ಬಗ್ಗೆ ನಾನೇ ಯೋಚನೆ ಮಾಡಲು ಪ್ರೇರೇಪಿಸಿತು. ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿಯೂ ನಡೆಯುವ ಈ ಘಟನೆ ಯಾರಲ್ಲೂ ನಿರ್ಮಿಸದ ಒಂದು ಚಮತ್ಕಾರವನ್ನು ನನ್ನಲ್ಲಿ ಉಂಟುಮಾಡಿತು. ಶಾಲೆಯನ್ನು ಬಿಟ್ಟು ನಗರದ ಪ್ರತಿಷ್ಠಿತ ಕಾಲೇಜಿಗೆ ವ್ಯಾಸಂಗಕ್ಕೆ ಸೇರಿದೆ. ಗುರುಗಳು ಮೊದಲ ತರಗತಿಯಲ್ಲಿಯೇ ಕಾಲೇಜಿನಲ್ಲಿ ಎಲ್ಲರೂ ತಮ್ಮ ತಮ್ಮ ಪರಿಚಯಗಳನ್ನು ಹೇಳಿಕೊಳ್ಳಿ ಎಂದಾಗ, ನನ್ನ ಬಗ್ಗೆ ಏನು ಹೇಳಿಕೊಳ್ಳುವುದು ಎಂದು ಯೋಚಿಸಿದೆ. ಕತ್ತು ತಿರುಗಿಸಿ ಹಿಂದೆ ನೋಡಿದರೆ ಅರವತ್ತಕ್ಕೂ ಹೆಚ್ಚು ಜನ ತರಗತಿಯಲ್ಲಿ ಕುಳಿತಿದ್ದರು. ಮೊದಲ ಬೆಂಚಿನಲ್ಲಿಯೇ ಕುಳಿತಿದ್ದ ನನ್ನ ಸರದಿ ಬಂದಾಗ ಮೊದಲು ನನ್ನ ಹೆಸರು, ಮನೆ, ಶಾಲೆ, ನನ್ನ ಅಂಕಗಳ ಬಗ್ಗೆ ಹೇಳಿ ಸುಮ್ಮನೇ ಕುಳಿತು ಬಿಟ್ಟೆ. ನನ್ನನ್ನು ಯಾರೂ ಹೆಚ್ಚಿಗೆ ಏನೂ ಕೇಳಲೂ ಇಲ್ಲ. ನಾಲ್ಕನೆಯ ನಂಬರ್‌ನ ವ್ಯಕ್ತಿಯಾಗಿ ತೆಪ್ಪಗೆ ಕುಳಿತ ನಂತರ ಒಂದು ಗಂಟೆಯ ಅವಧಿಯಲ್ಲಿ ಅರವತ್ತು ಜನ ವಿದ್ಯಾರ್ಥಿಗಳಲ್ಲಿ ಕೊನೆಯ ವ್ಯಕ್ತಿಯ ನಂಬರ್ ಕೇವಲ 22 ಆಗಿತ್ತು. ಉಳಿದಂತೆ ಎಷ್ಟೋ ಜನಕ್ಕೆ ತಮ್ಮ ಪರಿಚಯ ಹೇಳಿಕೊಳ್ಳಲು ಇದುವರೆಗೂ ಸಮಯ ಸಿಕ್ಕಿಲ್ಲ. ಆಗ ಮೊದಲ ಬಾರಿಗೆ ನನಗೆ ಅರ್ಥವಾದದ್ದು ಹೆಚ್ಚಿನ ಜನ ನಮ್ಮ ಬಗ್ಗೆ ಏನನ್ನಾದರೂ ಕಲ್ಪಿಸಿಕೊಳ್ಳುವುದು ಹಾಗೂ ನಮ್ಮ ಬಗ್ಗೆ ಚಿಂತಿಸುವುದು ನಾವು ಏನನ್ನು ಹೇಳಿಕೊಳ್ಳುತ್ತೇವೋ ಅದರ ಆಧಾರದ ಮೇಲೆ ಎಂದು. ಹತ್ತಿರತ್ತಿರ ಈ ಎರಡು ಡಜನ್ ಜನ ತಮ್ಮ ಬಗ್ಗೆ ಹೇಳಿಕೊಂಡದ್ದೆಲ್ಲಾ ಕೇಳಿದ ಮೇಲೆ ಇದಕ್ಕಿಂತ ಎಷ್ಟೋ ವಿಷಯ ನನಗೆ ಹೆಚ್ಚುವರಿಯಾಗಿ ಗೊತ್ತಿದೆ. ಹೇಳಬಹುದಿತ್ತಲ್ಲಾ ಎನ್ನಿಸಿತು. ಆದರೆ ಇವೆಲ್ಲಾ ಹೇಳಿಕೊಳ್ಳಬೇಕಾದ ವಿಷಯವೇ ಅಲ್ಲ ಎಂದುಕೊಂಡಿದ್ದ ನನಗೆ ಒಂದು ರೀತಿಯ ಆಶ್ಚರ್ಯವಾಯಿತು.

ನಾನು ಆಟ ಆಡುತ್ತೇನೆ, ಪುಸ್ತಕ ಓದುತ್ತೇನೆ, ಸಂಗೀತ ಕೇಳುತ್ತೇನೆ, ನಾಟಕ ನೋಡುತ್ತೇನೆ, ಅಂಚೆಚೀಟಿ ಸಂಗ್ರಹಿಸುತ್ತೇನೆ, ಬುಗುರಿ ತಿರುಗಿಸುತ್ತೇನೆ, ಪಟ ಹಾರಿಸುತ್ತೇನೆ, ಹೊಳೆಯಲ್ಲಿ ಈಜುತ್ತೇನೆ, ಮಿಮಿಕ್ರಿ ಮಾಡುತ್ತೇನೆ ಎಂದು ಹುಡುಗರು ಹಾಗೂ ಚಿತ್ರ ಬಿಡಿಸುತ್ತೇನೆ, ಹಸೆ ಹಾಕುತ್ತೇನೆ, ಅಡುಗೆ ಮಾಡುತ್ತೇನೆ, ಜಡೆ ಹೆಣೆಯುತ್ತೇನೆ, ಸೈಕಲ್ ತುಳಿಯುತ್ತೇನೆ ಎಂದೆಲ್ಲಾ ಹುಡುಗಿಯರು ಹೇಳುತ್ತಿದ್ದಾಗ

